**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 23.02.2026**

**ಮುಂದುವರೆದ ಮುಖ್ಯ ವಿಚಾರಣೆಃ**

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ವಿಷಯಗಳನ್ನು ನಾನೇ ಬರೆಸಿದ್ದು ಸದರಿ ವಿಷಯಗಳು ಸತ್ಯವಾಗಿರುತ್ತವೆ ಮತ್ತು ಪ್ರಮಾಣಪತ್ರದಲ್ಲಿ ನಾನು ನನ್ನ ಸಹಿ ಮಾಡಿರುತ್ತೇನೆ.

**ಪಾಟೀಸವಾಲುಃ 8, 11, 12ನೇ ಎದುರುದಾರರ ಪರ** ಶ್ರೀ ಹೆಚ್ ಎಸ್ ಕೆ **ವಕೀಲರಿಂದಃ** .

ಭೂಸ್ವಾಧೀನವಾದ ಜಮೀನು ತಿಮ್ಮಯ್ಯನವರಿಗೆ ಒಟ್ಟುಕುಟುಂಬದವರ ಪರವಾಗಿ ಆಗಿದೆ ಎನ್ನುವ ಬಗ್ಗೆ ಯಾವುದೇ ದಾಖಲೆಯನ್ನು ನಾನು ನೋಡಿಲ್ಲ. ಭೂಸ್ವಾಧೀನವಾದ ಜಮೀನನ್ನು ತಿಮ್ಮಯ್ಯನಿಗೆ ಸರ್ಕಾರದವರು ಉಚಿತವಾಗಿ ನೀಡಿದ್ದು ಎಂದರೆ ಸರಿಯಲ್ಲ. ಆ ಜಮೀನು ಮಂಜೂರು ಮಾಡುವಾಗ ಕುಟುಂಬದ ಪರವಾಗಿ ಎಂದು ಷರತ್ತು ಹಾಕಿ ಮಂಜೂರು ಮಾಡಿರುತ್ತಾರೆ. ಈ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ.

2.ಅರಸೀಕೆರೆ ನ್ಯಾಯಾಲಯದಲ್ಲಿ ಜಯಮ್ಮ ವಿಭಾಗ ಕೋರಿ ಹಾಕಿದ ಕೇಸಿನಲ್ಲಿ ನಾನು ಪಕ್ಷಗಾರ ಎಂದರೆ ಸರಿ. ಅದು ವಿಚಾರಣೆಗೆ ಬಾಕಿ ಇದೆ ಎಂದರೆ ನಿಜ. ಇದು ತಿಮ್ಮಯ್ಯನ ಸ್ವಯಾರ್ಜಿತ ಆಸ್ತಿ ಹಾಗೂ ಅವರು ತನ್ನ ಬುದ್ಧಿಶಕ್ತಿ ಮಾನಸಿಕ ಸ್ಥಿತಿ ದೈಹಿಕ ಸ್ಥಿತಿ ಚೆನ್ನಾಗಿದ್ದಾಗಲೇ ಈ ಸ್ವತ್ತನ್ನು ಯಲ್ಲಯ್ಯನಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆದ್ದರಿಂದ ಈ ಸ್ವತ್ತಿನ ಅವಾರ್ಡನ್ನು ಯಲ್ಲಯ್ಯನ ಹೆಸರಿಗೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಯಲ್ಲಯ್ಯನಿಗಲ್ಲದೆ ಬೇರೆ ಯಾರಿಗೂ ಈ ಹಣದಲ್ಲಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಹಣವನ್ನು ಕಬಳಿಸುವ ಉದ್ದೇಶದಿಂದ ನಮಗೂ ಹಕ್ಕಿದೆ ಎಂದು ಸುಳ್ಳು ತಕರಾರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**1ರಿಂದ 7ನೇ ಎದುರುದಾರರ ಪರವಾಗಿ ಪಾಟೀಸವಾಲುಃ**

ಈ ಜಮೀನು ಸರ್ಕಾರದಿಂದ ಒಟ್ಟುಕುಟುಂಬದ ಪರವಾಗಿ ಮಂಜೂರು ಮಾಡಿರುವುದು ಎಂದರೆ ಸರಿ. ಇದನ್ನು ತಿಮ್ಮಯ್ಯನವರು ಷರತ್ತು ಉಲ್ಲಂಘನೆ ಮಾಡಿ ಪುಟ್ಟಾಚಾರಿ ಎಂಬುವವರಿಗೆ

ಮಾರಾಟ ಮಾಡಿದ್ದು ಎಂದರೆ ಸರಿ. ಕಾನೂನಿಗೆ ವಿರುದ್ಧವಾಗಿ ತಿಮ್ಮಯ್ಯ ಮಾರಾಟ ಮಾಡಿದ್ದಾರೆ ಎಂದು ಹೇಳಿ ಎಸಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ ಎಂದರೆ ಸರಿ. ತಿಮ್ಮಯ್ಯನ ಪರವಾಗಿ ಎಸಿ ನ್ಯಾಯಾಲಯದ್ಲಿ ಆದ ಆದೇಶವನ್ನು ಪುಟ್ಟಾಚಾರಿಯವರು ಡಿಸಿ ನ್ಯಾಯಾಲಯದಲ್ಲಿ ಪ್ರಶ್ನಿಸಿದರು ಎಂದರೆ ನಿಜ. ಡಿಸಿ ನ್ಯಾಯಾಲಯದಲ್ಲಿ ಆದ ಆದೇಶವನ್ನು ತಿಮ್ಮಯ್ಯನವರು ಹೈಕೋರ್ಟ್ ನಲ್ಲಿ ಪ್ರಶ್ನಿಸಿದ್ದಾರೆ ಎಂದರೆ ನಿಜ. ಅಲ್ಲಿ ಕೂಡ ತಿಮ್ಮಯ್ಯನ ಪರವಾಗಿ ಆದೇಶ ಆಗಿದೆ ಎಂದರೆ ಸರಿ. ತಿಮ್ಮಯ್ಯನವರ ಮೊದಲನೆ ಮಗ ಜಯಣ್ಣ ಉರುಫ್ ಸಿದ್ದಯ್ಯ ಈ ಎಲ್ಲಾ ನ್ಯಾಯಾಲಯದಲ್ಲಿ ಹೋರಾಟ ಮಾಡಿದ್ದು ಎಂದರೆ ನಿಜ. ಆ ಕೇಸುಗಳು ನಡೆಯುವಾಗ ಯಲ್ಲಯ್ಯನಾಗಲೀ ಸಣ್ಣತಿಮ್ಮಯ್ಯನಾಗಲೀ ಯಾವುದೇ ಸಹಾಯ ಮಾಡದಿದ್ದರೂ ಕೂಡ ಅಕ್ರಮವಾಗಿ ಅವರ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ. ಯಲ್ಲಯ್ಯನು ತಿಮ್ಮಯ್ಯನ ವಾರಸುದಾರರನ್ನು ಕೈಬಿಟ್ಟು ಅವರ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ.. ತಿಮ್ಮಯ್ಯನವರು ತಮ್ಮ ಜೀವಿತ ಕಾಲದಲ್ಲಿ ಈ ಜಮೀನಿನಲ್ಲಿ ಮನೆ ಕಟ್ಟಿಕೊಂಡು ಅಭಿವೃದ್ಧಿ ಮಾಡಿದ್ದರು ಎಂದರೆ ನಿಜ. ತಿಮ್ಮಯ್ಯ ತೀರಿಕೊಂಡ ನಂತರ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಯಲ್ಲಯ್ಯ ಅದರ ಆದಾಯವನ್ನು ಕಬಳಿಸಿಕೊಂಡು ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. ತಿಮ್ಮಯ್ಯನವರು ಪರಿಶಿಷ್ಟ ಜಾತಿಗೆ ಸೇರಿದ್ದರಿಂದ ಒಟ್ಟುಕುಟುಂಬಕ್ಕಾಗಿ ಆ ಜಮೀನು ಮಂಜೂರು ಮಾಡಿದ್ದಾರೆಎಂದರೆ ಸರಿ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**